REVIEW OF RESEARCH
ISSN: 2249-894X
IMPACT FACTOR : 5.2331(UIF)
VOLUME - 7 | ISSUE - 5 | FEBRUARY - 2018

# ಹರಿಹರನ ಬಸವರಾಜ ದೇವರ ರಗಳೆ

**ಡಾ. ಸುವರ್ಣ ಎಂ. ಹಿರೇಮಠ**
**ಕನ್ನಡ ಉಪನ್ಯಾಸಕರು**
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ಜೇವರ್ಗಿ ಕಾಲೋನಿ ಕಲಬುರಗಿ.

ರಗಳೆ ಕವಿಯೆಂದೇ ಪ್ರಸಿದ್ಧಿಯಾದ ಹರಿಹರ ಬಸವರಾಜ ದೇವರ ರಗಳೆಯ ಮೂಲಕ ಬಸವಣ್ಣನನ್ನು ಒಬ್ಬ ಪವಾಡ ಪುರುಷನನ್ನಾಗಿ ಮಾಡುತ್ತಾನೆ. ಬಸವರಾಜ ದೇವರ ರಗಳೆ ಬಸವಣ್ಣನ ಕುರಿತ ಮೊದಲ ಕೃತಿಯಾಗಿದೆ. ಇಲ್ಲಿ ಅವನ ಚರಿತ್ರೆ ಮುಖ್ಯವಲ್ಲ ಚಾರಿತ್ರ್ಯ ಮುಖ್ಯ. ಬಸವಣ್ಣನ ವ್ಯಕ್ತಿತ್ವವನ್ನು ವೈಭವೀಕರಿಸಿದ್ದಾನೆ.

ಬಸವರಾಜ ದೇವರ ರಗಳೆ ಬಸವಣ್ಣನ ವ್ಯಕ್ತಿತ್ವವನ್ನು ಉಜ್ವಲವಾಗಿ ಅನಾವರಣಗೊಳಿಸಿರುವ ಮಹತ್ವದ ಕೃತಿ. ವಚನಕಾರರ ನಂತರದಲ್ಲಿ ಬಂದ ಹರಿಹರ ಸಹಜವಾಗಿ ಭಕ್ತಿ ಕವಿಯಾದ್ದರಿಂದ ಬಸವಣ್ಣನ ಹೋರಾಟದ ಬದುಕು ತಾತ್ವಿಕ ಚಿಂತನೆಗಳನ್ನು ಭಕ್ತಿ ಪರವಶತೆಯ ಭಾವಾವೇಷದಲ್ಲಿ ಕಡೆದು ಪುರಾಣ–ಇತಿಹಾಸ ಪ್ರತೀಕವಾದ ಆಯಾಮದಲ್ಲಿ ನಿರೂಪಿಸಿದ್ದಾನೆ.

ಹರಿಹರನ ಕಾಲಕ್ಕಾಗಲೇ ಬಸವಣ್ಣ ಸಾಮಾನ್ಯ ವ್ಯಕ್ತಿತ್ವವನ್ನು ಕಳೆದುಕೊಂಡು ಅಸಾಮಾನ್ಯ ವ್ಯಕ್ತಿತ್ವದ ಮಹಾಪುರುಷನಾಗಿದ್ದ. ಈತನು ಜನಗಳ ಮಧ್ಯೆ ಪವಾಡಪುರುಷನಾಗಿ, ಒಂದು ಕಡೆ ದೇವರಂತೆ, ಇನ್ನೊಂದು ಕಡೆ ಜನಗಳೊಳಗಿರುವ ರಾಜನಂತೆ ಪ್ರತಿಬಿಂಬಿಸಲ್ಪಟ್ಟಿದ್ದ. ಹಾಗಾಗಿ **ಹರಿಹರ ಬಸವಣ್ಣನ ವ್ಯಕ್ತಿತ್ವವನ್ನು ರಾಜ–ದೇವರ ಪರಿಕಲ್ಪನೆಯಲ್ಲಿ ಚಿತ್ರಿಸಿದ್ದಾರೆ.** ಹರಿಹರನ ಕಾವ್ಯದ ಪರಿಕಲ್ಪನೆ ಹೊಚ್ಚ ಹೊಸದು. ಭಕ್ತಿ ಪರವಶತೆಯಲ್ಲಿ ಕ್ರಾಂತಿಕಾರಕ ತತ್ತ್ವ ಚಿಂತನೆಯನ್ನು ಅಳವಡಿಸಿ ಅದಕ್ಕೊಂದು ಪ್ರಗತಿಪರ ಆಯಾಮವನ್ನು ನೀಡಿದ್ದಾನೆ.

ಹರಿಹರನ ಪ್ರಕಾರ ಬಸವಣ್ಣನು ಕೈಲಾಸದ ಶಿವನ ಒಡ್ಡೋಲಗದಲ್ಲಿ ವೃಷಭಮುಖನಾಗಿದ್ದು, ಷಣ್ಮುಖನಿಗೆ ಕಣ್ತಪ್ಪಿನಿಂದಾಗಿ ಪ್ರಸಾದ ಕೊಡದೇ, ಕೊಟ್ಟಿದ್ದೇನೆಂದು ಹೇಳಿದ ಒಂದು ತಪ್ಪಿಗಾಗಿ, ಶಿವ ಕೋಪಗೊಂಡು ಅವನಿಗೆ ಶಾಪ ನೀಡುತ್ತಾನೆ. ಆಗ ಅದರ ವಿಮೋಚನೆಗಾಗಿ ಭೂಲೋಕದಲ್ಲಿ ಭಾಗೇವಾಡಿಯಲ್ಲಿ ಮಾದಿರಾಜ ಮಾದಲಾಂಬಿಕೆಯರಿಗೆ ಮಗನಾಗಿ ಜನಿಸುತ್ತಾನೆ. ತನ್ನ ಭಕ್ತಿ ನಿಷ್ಠೆ ಪೂಜೆಗಳಿಂದಾಗಿ ಹಂತ ಹಂತವಾಗಿ ಬೆಳೆದು ವೈಚಾರಿಕ ಮಟ್ಟದ ಶಿವ ಭಕ್ತನಾಗುತ್ತಾನೆ. ಈತನ ವೈಚಾರಿಕತೆ. ಬಾಲ್ಯದಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಳ್ಳುತ್ತಾನೆ. ನಂತರ ೧೬ನೇಯ ವಯಸ್ಸಿನಲ್ಲಿ ಜನಿವಾರವನ್ನು ಕಿತ್ತಿ ಬಿಸಾಡಿ ಕಪ್ಪಡಿ ಸಂಗಮಕ್ಕೆ ಬರುತ್ತಾನೆ. ಕಪ್ಪಡಿ ಸಂಗಮದಲ್ಲಿ ಈಶಾನ್ಯ ಗುರುಗಳ ಮಾರ್ಗದರ್ಶನದಲ್ಲಿ ಶಿವನ ಧ್ಯಾನವನ್ನು ಮಾಡುತ್ತಾನೆ.

೧. "ಕರ್ಮಲತೆಯಂತಿರ್ದ ಜನ್ನಿವರಮಂ ಕಳೆದು ಬಿಸುಟ್ಟು,
ನವ್ಯದುಕೂಲಂ ತೆಗೆದುಟ್ಟು ದಿವ್ಯವಾಸ್ತ್ರಮಂ ಹೊದೆದು"

೨. ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪಳೆದು ಬಿಸುಟ್ಟು

ಬಸವಣ್ಣ ಬಾಗೇವಾಡಿಯನ್ನು ಬಿಟ್ಟು ಬ್ರಾಹ್ಮಣ್ಯವನ್ನು ನಿರಾಕರಿಸುತ್ತಾನೆ. ಈ ಮೂಲಕ ಹರಿಹರ ಬಸವಣ್ಣನನ್ನು ಜಾತ್ಯಾತೀತನಾಗಿಸುತ್ತಾನೆ. ಇದು **ಕ್ರಾಂತಿಕಾರಿ ಕವಿಯ ಪರಿಕಲ್ಪನೆಯ ತಾತ್ವಿಕ ಚಿಂತನೆಯಾಗಿದೆ.**



ಕಪ್ಪಡಿಯಿಂದ ಮಂಗಳವಾಡಕ್ಕೆ ಬಂದು ಬಸವಣ್ಣ ಅತ್ಯುನ್ನತ ಸ್ಥಾನವನ್ನು ಪಡೆಯುತ್ತಾನೆ. ನಂತರ ಅವನ ಭಕ್ತಿ ಜೀವನದ ೮ ಪವಾಡಗಳು ಮುಖ್ಯವಾಗುತ್ತವೆ. ೧) ಕೇದಗೆ ಹೂ ವಿನ ಕಥೆ ೨) ಭಂಡಾರ ಪ್ರಕರಣ ೩) ಲಿಂಗಕ್ಕೆ ಬದಲು ಬದನೆಕಾಯಿ ೪) ಹಸುವಿನ ಕಳ್ಳತನ ೫) ಭಕ್ತರ ಆಗಮನ – ಪ್ರಾಣಹರಣ ೬) ಕಂಬಳಿ ನಾಗಿದೇವನ ಕಥೆ ೭) ಕಿನ್ನರಿ ಬೊಮ್ಮಯ್ಯನ ಕಥೆ ೮) ಮಹಾದೇವ ಶೆಟ್ಟಿಯ ಕಥೆ.

ಹರಿಹರನ ಕಥಾ ಪುರುಷರೆಲ್ಲರೂ ಕಾರಣಿಕ ಪುರುಷರು. ಹೀಗಾಗಿ ಹರಿಹರನ

ಸಾಮಾನ್ಯ ಲಕ್ಷಣವೇ ಇದಾಗಿದೆ. ದೈವವು ಒಂದು ಪಾತ್ರವಾಗಿ ಕಾಣಿಸಿಕೊಳ್ಳುವುದು ಹರಿಹರನ ರಗಳೆಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

## ಸಂಗಮೇಶ್ವರನ ಪೂಜೆಯ ವರ್ಣನೆ :

"ಅಳಿಯರಗದ ಅನಿಲವಲುಗದ ರವಿಕರಂಪುಗದ ಸುಳಗೊಂಡಗಾಳ ಅಸದಳ" ಈ ರೀತಿಯಾಗಿ ಮೀಸಲು ಹೂಗಳನ್ನು ಪೂಜೆಗೆ ತರುತ್ತಾನೆ. ಈ ರೀತಿ ವರ್ಣಿಸುವುದು ಹರಿಹರನ ಶಬ್ದಪುಂಜಗಳಿಗೆ ಹಿಡಿದ ಕನ್ನಡಿಯಾಗಿದೆ. ಇದು ಬಸವರಾಜನ ಭಕ್ತಿಯ ತನ್ಮಯತೆಯನ್ನು ಸೂಚಿಸುತ್ತದೆ. ಭಕ್ತಿಯ ತೀವ್ರತೆಯನ್ನು ತಿಳಿಸುವುದು ಹರಿಹರನ ಸೃಜನ ಪ್ರವೃತ್ತಿ ಇಲ್ಲಿ ಪ್ರಮುಖವಾಗಿದೆ.

ನಾಲ್ಕನೇಯ ಸ್ಥಲದಲ್ಲಿ :– **ಜನಿವಾರ – ಸಂಪ್ರದಾಯದ ಸಂಕೇತ, ಲಿಂಗಧಾರಣೆ ದೇಹವೇ ದೇಗುಲ ಪರಿಕಲ್ಪನೆ.** ಈ ಮೂಲಕ ವೀರಶೈವ ಧರ್ಮದ ತಾತ್ವಿಕ ನೆಲೆಯನ್ನು ಸಹಜವಾಗಿ ಹರಿಹರ ನಿರೂಪಿಸಿದ್ದಾನೆ. ನಂತರ ಮಂಗಳವಾಡಕ್ಕೆ ಬರುತ್ತಾನೆ.

ಐದನೇಯ ಸ್ಥಲದಲ್ಲಿ :– ಬಸವಣ್ಣನವರು ಪ್ರಜಾಪ್ರಭುತ್ವ ಮಾರ್ಗದರ್ಶಿಗಳು, ಕಾರ್ಯೋನ್ಮುಖ ಕಾರ್ಯ ಸಾಧನೆಗಳು ದಿನೇ ದಿನೇ ವೃದ್ಧಿಸುತ್ತಾ ಹೋದಂತೆಲ್ಲ ಬಸವಣ್ಣನ ವಿರೋಧಿಗಳಿಗೆ ಸಹಿಸಲಾಗುವುದಿಲ್ಲ. ಇವರು ಶರಣಕುಲದ ಪ್ರಜಾ ಸಮೂಹಕ್ಕೆ ದಾಸೋಹ ಸಹಪಂಕ್ತಿ ಭೋಜನ, ವಸ್ತ್ರಾಭರಣ, ಧನಕನಕಾದಿಗಳೆಲ್ಲವನ್ನು ಅರ್ಪಿಸಿ ಸೇವೆ ಮಾಡಿದ ಕಾಯಕನಿಷ್ಠೆಯನ್ನು ಪ್ರಶ್ನಿಸಿ ಆರೋಪ ಹೋರಿಸಿರುತ್ತಾರೆ. "ರಾಜ್ಯದ ಭಂಡಾರದಿಂದ ಹಣದ ದುರುಪಯೋಗವಾಗಿದೆ ಎಂದು ಬಿಜ್ಜಳನಿಗೆ ದೂರು ನೀಡುತ್ತಾರೆ.

ಅದೇ ಪ್ರಕಾರ ಬಿಜ್ಜಳ ಬಸವರಾಜನನ್ನು ಪರೀಕ್ಷೆ ಮಾಡಿದಾಗ ಭಂಡಾರದ ಹಣವು ಶರಣರಿಗೆ ಖರ್ಚು ಮಾಡಿದಕ್ಕಿಂತ ಸಾಸಿರ ಮಡಿವೃದ್ಧಿಯಾಗುತ್ತದೆ. ಈ ಪವಾಡ ಕಾಯಕ ನಿಷ್ಠೆಗೆ ಸಾಕ್ಷಿಯಾಗಿದೆ. ಹೀಗೆ ಅನೇಕ ಆಪಾದನೆಗಳಿಗೆ ಬಸವಣ್ಣನು ಎದೆಗುಂದದೆ ತನ್ನ ತೀಕ್ಷ್ಣ ಬುದ್ಧಿವಂತಿಕೆಯಿಂದ ಅನೇಕ ಪವಾಡಗಳನ್ನು ತೋರಿಸುತ್ತಾನೆ.

ಕೇದಗೆಯ ಹೂವಿನ ಕಥೆಯು ಧರ್ಮ ಸಂಘರ್ಷದ ನೆಲೆಯ ಕಥೆಯಾಗಿದೆ. ಬಸವರಾಜ, ಗಂಗಾದೇವಿ ಮತ್ತು ಮಾಯಾದೇವಿಯರೊಡನೆ ಸಂತೋಷದಿಂದಿರುತ್ತಾನೆ. ರಾಜನ ಪಕ್ಕದ ಪೀಠದ ಮೇಲೆ ಕುಳಿತಿರುವುದು ಅವನ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಬಿಜ್ಜಳನ ಆಸ್ಥಾನದಲ್ಲಿ ಬಸವರಾಜನಿಗೆ ಸಿಕ್ಕ ಪ್ರಾಮುಖ್ಯತೆಯನ್ನು ಕಂಡು ಆಸ್ಥಾನದ ಬ್ರಾಹ್ಮಣರು ಅಸೂಯೆ ಪಡುತ್ತಾರೆ. ಹೂಗಾರನೊಬ್ಬ ಕೇದಗೆಯ ಹೂವನ್ನು ತಂದು ಅರಸನಿಗೆ ಕೊಡುತ್ತಾನೆ. ಅರಸನು ಆ ಹೂವಿನ ಒಂದು ಎಸಳನ್ನು ತೆಗೆದು ಬಸವರಾಜನಿಗೆ ಕೊಡುತ್ತಾನೆ. ಆಗ ಬಸವರಾಜ ಆ ಹೂವನ್ನು ತನ್ನ ಕಕ್ಷ ಪಟದಲ್ಲಿದ್ದ ಸಂಗಮೇಶ್ವರನ ಲಿಂಗಕ್ಕೆ ಏರಿಸಿದಾಗ ಅಲ್ಲಿರುವ ನಾರಾಯಣ ಭಟ್ಟರು ಅದು ಆಗಮಗಳಿಗೆ ವಿರುದ್ಧವೆಂದಾಗ ಬಸವರಾಜ 'ದೇವಂ ಭಕ್ತರ ಕೊಟ್ಟೊಡೆ ಕೈಕೊಳ್ವಂ' ಎಂದು ಹೇಳಿ ಅದಕ್ಕೆ ಕುರುಹು ಆಗಿ ತನ್ನ ಕೆಲಬಲದ ಸಹಸ್ರ ಮಾಹೇಶ್ವರರ ಕರಂಡಕಗಳನ್ನು ತೆಗಿಸಿ ಅಲ್ಲಿನ ಶಿವಲಿಂಗದ ತಲೆಯ ಮೇಲೆ ಕೇದಗೆಯ ಹೂವಿದ್ದುದನ್ನು ತೋರಿಸುತ್ತಾನೆ. ಇದನ್ನು ನೋಡಿದ ಬಿಜ್ಜಳನೇ ಒಂದು ಕ್ಷಣ ನಡಗುತ್ತಾನೆ.

ಭಕ್ತಿಯಿಂದ ದೇವನು ತನಗೆ ಏನನ್ನು ಕೊಟ್ಟರು ಅದನ್ನು ಸ್ವೀಕರಿಸುತ್ತಾನೆ. ಇಲ್ಲಿ ಆಚರಣೆ ಮುಖ್ಯವಲ್ಲ. ಅದರ ಹಿಂದಿನ ಶ್ರದ್ಧೆ ಮುಖ್ಯ. ಹೀಗಾಗಿ ಬಸವರಾಜನು ಅರ್ಪಿಸಿದ ಆ ಹೂ ಎಲ್ಲರ ಕಕ್ಷ ಪಟದಲ್ಲೂ ಕಂಡುಬರುತ್ತದೆ.

ಹರಿಹರ ಇಲ್ಲಿ ಭಕ್ತಿ ಆವೇಶದಲ್ಲಿ ಕಲಾತ್ಮಕತೆಯ ಎಚ್ಚರವನ್ನು ಮರೆಯುತ್ತಾನೆ. ಕಲ್ಪನೆಯ ಅಂಶದಿಂದ ಬಿಜ್ಜಳನಿಗೆ ಕುಂದು ತರುತ್ತಾನೆ. ಇದೊಂದು ಭಕ್ತಿಪ್ರಧಾನ ಪವಾಡವಾಗಿದೆ.

ಕೆಲವು ಡಾಂಭಿಕ ಶರಣರು ಲಿಂಗಕ್ಕೆ ಬದಲು ಬದನೆಕಾಯಿಗಳನ್ನು ಕಕ್ಷ ಪಟದಲ್ಲಿ ಕಟ್ಟಿಕೊಂಡು ಬಸವರಾಜನನ್ನು ವಿರೋಧಿಸಲು ಬಂದಿದ್ದರು. ಆಗ ಬಸವರಾಜ ಭಕ್ತಿ ಪೂರ್ವಕವಾಗಿ ಅವರಿಗೆ ನಮಸ್ಕರಿಸುತ್ತಾನೆ, ಶರಣರೆಂದು ಎಂದು ಪೂಜೆ ಮಾಡುತ್ತಾನೆ. ಆಗ ಎಲ್ಲಾ ಶರಣರು ಬಸವರಾಜನನ್ನು ಗೇಲಿ ಮಾಡುತ್ತಾರೆ. ಆದರೆ ಬದನೆಕಾಯಿಗೆ ಬದಲು ಲಿಂಗವಾಗಿರುತ್ತವೆ. ಬಸವರಾಜನ ಭಕ್ತಿ ಪರಕಾಷ್ಠತೆಯನ್ನು ಬಿಂಬಿಸುತ್ತದೆ. ಬಸವರಾಜನನ್ನು ಟೀಕಿಸಲು, ಪರೀಕ್ಷಿಸಲು ಬಂದ ಕೆಲವು ಡಾಂಭಿಕ ಶರಣರು, ಬಸವರಾಜನ ಭಕ್ತಿ ಪ್ರಭಾವಕ್ಕೆ ಸಿಲುಕಿ ನಿಜ ಶರಣರಾಗಿ ಬಸವರಾಜನಲ್ಲಿ ಕ್ಷಮೆಯಾಚಿಸುತ್ತಾರೆ.

ಭಕ್ತರ ವೇಷದ ಕಳ್ಳರು ಗೋವುಗಳನ್ನು ಅಪಹರಿಸಿದಾಗ, ಶಿವವೇಷಧಾರಿಗಳು ಎಂದಿಗೂ ಕಳ್ಳರಲ್ಲ. ಅವರು ತಮ್ಮ ವಸ್ತುವನ್ನು ತಾವೇ ಕದಿಯುವರೆ ಎಂದು ಹಸುಗಳನ್ನು ಕರೆದುಕೊಂಡುಹೋಗಿ, ಕರುಗಳನ್ನು ಬಿಟ್ಟುಹೋಗಿದ್ದಾರೆ. ಹಸು–ಕರು (ತಾಯಿ–ಮಗು)ವನ್ನು ದೂರ ಮಾಡಬಾರದು. ಅವುಗಳನ್ನು ಬಿಟ್ಟುಬಿಡಿ ಎಂದು ಕರುಗಳನ್ನು ಬಿಡಿಸುತ್ತಾನೆ. ಇದು ಬಸವರಾಜನ ಮಾನವೀಯತೆಯನ್ನು ಸೂಚಿಸುತ್ತದೆ.

ಕಳ್ಳವೇಷದ ಜಂಗಮರು ಧರಿಸಿದ್ದ ಬದನೆಕಾಯಿಗಳೆಲ್ಲವೂ ಲಿಂಗಗಳಾಗುತ್ತವೆ. ಕಿನ್ನರಿ ಬೊಮ್ಮಯ್ಯನ ಉಳ್ಳಿ ಪ್ರಸಂಗದಲ್ಲಿ ಉಳ್ಳಿಯಾನ್ನ ಅಭೋಜ್ಯ ಎಂದಿದ್ದಕ್ಕೆ ಅದರಿಂದ ಮುನಿಸಿಕೊಂಡ ಬೊಮ್ಮಯ್ಯನನ್ನು ಸಂತೃಪ್ತಗೊಳಿಸಿ ಉಳ್ಳಿಯ ಉತ್ಸವವನ್ನು ಏರ್ಪಡಿಸಿ ತನ್ನ ಪವಾಡವನ್ನು ಮೆರೆಯುತ್ತಾನೆ. ಇವು ಬಸವರಾಜನ ವ್ಯಕ್ತಿತ್ವದ ವಿವಿಧ ಮುಖಗಳನ್ನು ತಿಳಿಸುವ ಪ್ರಸಂಗಗಳಾಗಿವೆ.

ಹರಿಹರನ ಕ್ರಾಂತಿಕಾರಿ ಭಕ್ತಿಯ ನಿಷ್ಠೆಯ ನಿರ್ವಹಣೆಯಲ್ಲಿ ಬಸವರಾಜನಿಂದ ಮಾಡಿಸುವ ಕಂಬಳಿ ನಾಗಿದೇವನ ಪ್ರಸಂಗದಲ್ಲಿ ಜರುಗುವ ಪವಾಡ ಅತ್ಯದ್ಭುತವಾದುದು. ಈ ಪ್ರಸಂಗದಲ್ಲಿ ಬಸವರಾಜ ಹೊಲೆಯನಾದ ನಾಗಿದೇವನ ಮನೆಯಲ್ಲಿ ಉಂಡು ತನ್ನ ಜಾತ್ಯಾತೀತವಾದ ನಿಲುವನ್ನು ವ್ಯಕ್ತಪಡಿಸುತ್ತಾನೆ. ಬಿಜ್ಜಳನ ಸವಾಲಿನಂತೆ ನಾಗಿದೇವನ ಹೆಬ್ಬೆರಳಿನಿಂದ ಹಾಲಿನ ಹಾಲಾಹಲ ಸುರಿಸಿ ಪವಾಡವನ್ನು ತೋರಿಸುತ್ತಾನೆ. ಅಂಚಿನಲ್ಲಿರುವ ವ್ಯಕ್ತಿಯನ್ನು ಕೇಂದ್ರಕ್ಕೆ ಕರೆತರುವ ಪ್ರಯತ್ನ ಮಾಡಿದ್ದಾನೆ. ನಿರ್ಲಕ್ಷಕ್ಕೆ ಒಳಗಾಗಿದ್ದ ಕುಲದವನಿಗೆ ಪ್ರಾಮುಖ್ಯತೆ ಗಳಿಸಿಕೊಟ್ಟನು. ಇದು ಶಿವಶರಣರ ಮಹತ್ವವನ್ನು ತಿಳಿಸುತ್ತದೆ.

ಕಾವ್ಯದ ಕೊನೆಯಲ್ಲಿ ಸಂಗಮೇಶ್ವರನೇ ಮಾರುವೇಷದಲ್ಲಿ ಪರಮಭಕ್ತ ಬಸವಣ್ಣನನ್ನು ಪರೀಕ್ಷೆ ಮಾಡಿ ಲೋಕಕ್ಕೆ ತೋರಿಸುವ ಪ್ರಸಂಗ ಜಂಗಮ ನಿಷ್ಠೆಗೆ ಸಾಕ್ಷಿಯಾಗಿದೆ. ಬಸವಣ್ಣ ಎಂತಹ ತ್ಯಾಗಿ ಎಂದರೆ ಮಾರುವೇಷದ ಪರಶಿವ ಬಸವಣ್ಣನ ಮನೆಗೆ ಅತಿಥಿಯಾಗಿ ಬಂದು ಕೇಳುವ ಬಿಕ್ಷೆ ಸಾಮಾನ್ಯದಲ್ಲ.

"ಬಸವರಾಜ ನಾವು ಹೆಂಗೂಸಿಲ್ಲದೆ ಇದ್ದುದಿಲ್ಲ" ಎಂದು ಹೇಳಿ ರಾತ್ರಿಯಲ್ಲಿ ಮಲಗಲು ಹೆಣ್ಣನ್ನು ಅಪೇಕ್ಷಿಸಿದಾಗ, ತನ್ನ ಹೆಂಡತಿ ಮಾಯಿದೇವಿಯನ್ನು ಕಳುಹಿಸಿಕೊಡುತ್ತಾನೆ. ಆಗ ಪರಶಿವ ಬಸವಣ್ಣನ ದೃಢಭಕ್ತಿಗೆ ಮೆಚ್ಚಿ ತನ್ನ ನಿಜ ಸ್ವರೂಪವನ್ನು ತೋರಿಸಿ, ತಾನೇ ಸೋತು ಶರಣಾಗುತ್ತಾನೆ.

ಶಿವನು "ಜಂಗಮಾಕಾರದೊಳ್ ನಿಂದು" ಬಸವಣ್ಣನಿಗೆ ನೀನು ಈ ಲೋಕದಲ್ಲಿರುವುದು ಸಾಕು, ಪುಷ್ಪಕದಲ್ಲಿ ಕೈಲಾಸಕ್ಕೆ ಬಾ" ಎಂದು ಕರೆದು ಬಸವಣ್ಣನ ದೃಢಭಕ್ತಿಯನ್ನು ಲೋಕಕ್ಕೆ ಸಾರುತ್ತಾನೆ.

ಹೀಗೆ ಹರಿಹರ ಬಸವಣ್ಣನನ್ನು ವ್ಯಕ್ತಿತ್ವದ ಮಹಿಮಾ ಜಗತ್ತಿನಲ್ಲಿ ಬಸವಣ್ಣನನ್ನು, ತನ್ನನ್ನು ಬಳಸಿಕೊಂಡು ಯುಗಧರ್ಮದ ಕ್ರಾಂತಿಕಾರಿ ಕವಿಯಾಗಿದ್ದಾನೆ.

ಆದ್ದರಿಂದಲೇ ಹೆಚ್ ದೇವಿರಪ್ಪನವರು – "ಹರಿಹರನು ಚಿತ್ರಿಸಿರುವ ಬಸವಣ್ಣ ಮಹಾಕಾರಣಿಕ, ವಿಚಾರವಾದಿ, ಭಕ್ತಪ್ರೇಮಿ, ಜಂಗಮಪ್ರಾಣಿ ಪವಾಡಪುರುಷ, ದಾನಾದಿ ಸದ್ಗುಣಗಳ ನಿಧಿಯಾತ. ಇವುಗಳಂದ ಆತ ಮೆರೆಯಲಿಲ್ಲ, ಆದರೆ ಅವನ ಕೀರ್ತಿ ಹಾಗೂ ವಚನಗಳೂ ದೇಶ ದೇಶಗಳಲ್ಲಿ ಮೆರೆದವು ಎಂದು ಅಭಿಪ್ರಾಯ ಪಟ್ಟಿದ್ದಾರೆ.

## ಆಕರ ಗ್ರಂಥಗಳು

೧) ಕನ್ನಡ ಸಾಹಿತ್ಯ ಚರಿತ್ರೆ
ಡಾ॥ ತ.ಸು. ಶಾಮರಾಯ, ಉದಯ ರವಿ ಪ್ರಿಂಟರ್ಸ್ ಕೃಷ್ಣಮೂರ್ತಿ ಪುರಂ
ಮೈಸೂರು–೪.

೨) ಬಸವರಾಜ ದೇವರ ರಗಳೆ
ಡಾ॥ ಟಿ.ಎಸ್. ವೆಂಕಟಣ್ಣಯ್ಯ, ಉದಯ ರವಿ ಪ್ರಿಂಟರ್ಸ್ ಕೃಷ್ಣಮೂರ್ತಿ ಪುರಂ
ಮೈಸೂರು–೪.

೩) ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ
ಸಂ: ಡಾ॥ ಸಿ.ಬಿ. ಹೊನ್ನಯ್ಯ, ಜೈಭೀಮ ಪ್ರಕಾಶನ ನಾಗದೇವನ ಹಳ್ಳಿ
ಬೆಂಗಳೂರು–೫೬.

೪) ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ
ಪ್ರೊ॥ ಕಾಳೇಗೌಡ ನಾಗವಾರ ಸಪ್ನ ಬುಕ್‌ಹೌಸ ಗಾಂಧಿ ನಗರ
ಬೆಂಗಳೂರು–೯.